1 ದೇವೀರಿ 2 ಕಾನೂರು ಹೆಗ್ಗಡತಿ 3 ಚಂದ್ರಮುಖಿ ಪ್ರಾಣಸಖಿ 4 ಹೂಮಳೆ 5 ಶಬ್ದವೇದಿ 6 ಹೃದಯ ಹೃದಯ 7 ನಂಬರ್ – 1 8 ಚೈತ್ರದ ಚಿಗುರು 9 ಆರ್ಯಭಟ 10 ಪ್ರೇಮ ಪ್ರೇಮ ಪ್ರೇಮ 11 ವರ್ಷ ಋತು 12 ಕನಸಲು ನೀನೆ ಮನಸಲೂ ನೀನೆ 13 ಬಣ್ಣದ ಹೆಜ್ಜೆ 14 ಜನುಮದಾತ 15 ಅರುಣೋದಯ 16 ನನ್ನಾಸೆಯ ಹೂವೆ 17 ಜೀವನರಾಗ 18 ಗಾಜಿನ ಮನೆ 19 ಮನಸ್ಸು 20 ಒಂತೆ ಅಡ್ಜೆಸ್ಟ್ ಮಲ್ಪೆ

ಹಾಗೂ ಉಳಿದ ಅನುದಾನದಲ್ಲಿ ಇಲಾಖಾ ಚಿತ್ರಮಂದಿರಕ್ಕೆ ನೂತನ ಪ್ರೋಜೆಕ್ಟರುಗಳ ಖರೀದಿಗಾಗಿ ರೂ 14 ಲಕ್ಷ ನೂತನ 4 ಚಿತ್ರಮಂದಿರಗಳಿಗೆ ತಲಾ ರೂ 5 00 ಲಕ್ಷಗಳ ಸಹಾಯಧನ ಗುಣಾತ್ಮಕ ಸಮಿತಿಯ ಅತಿಥಿ ವೆಚ್ಚ ಹಾಗೂ ದಿನಭತ್ಯೆ ಪಾವತಿ – ಚಿತ್ರಮಂದಿರದ ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದೆ

ವಿವರಗಳು 2003–04ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ (1) 1999–2000ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗ ತಲಾ ರೂ 5 00 ಲಕ್ಷಗಳ ಅಂತಿಮ ಕಂತಿನ ಸಹಾಯಧನ ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ದೇವೀರಿ 2 ಕಾನೂರು ಹೆಗ್ಗಡತಿ 3 ಚಂದ್ರಮುಖಿ ಪ್ರಾಣಸಖಿ 5 ಹೂಮಳೆ 5 ಶಬ್ದವೇದಿ 6 ಹೃದಯ ಹೃದಯ 7 ನಂಬರ್ – 1 8 ಚೈತ್ರದ ಚಿಗುರು 9 ಆರ್ಯಭಟ 10 ಪ್ರೇಮ ಪ್ರೇಮ ಪ್ರೇಮ 11 ವರ್ಷ ಋತು 12 ಕನಸಲೂ ನೀನೆ ಮನಸಲೂ ನೀನೆ 13 ಬಣ್ಣದ ಹೆಜ್ಜೆ 14 ಜನುಮದಾತ 15 ಅರುಣೋದಯ 16 ನನ್ನಾಸೆಯ ಹೂವೆ 17 ಜೀವನರಾಗ 18 ಗಾಜಿನ ಮನೆ 19 ಮನಸ್ಸು 20 ಒಂತೆ ಅಡ್ಜೆಸ್ಟ್ ಮಲ್ಪೆ ಹಾಗೂ

(2) 2001–01ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗೆ ತಲಾ ರೂ 5 00 ಲಕ್ಷಗಳ ಭಾಗಶ ಸಹಾಯಧನ ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ಮುಸ್ಸಂಜೆ 2 ಎ ಕೆ 47 3 ಚಾಮುಂಡಿ 4 ಹಬ್ಬ 5 ವಂದೇ ಮಾತರಂ 6 ಚಂದನ ಚಿಗುರು 7 ಸುಲ್ತಾನ್ 8 ಗಟ್ಟಿಮೇಳ 9 ಹಗಲುವೇಷ 10 ಉತ್ತರ ದ್ರುವದಿಂ ದಕ್ಷಿಣ ಧ್ರುವಕೂ 11 ಭಾರತನಾರಿ 12 ಹ್ಯಾಟ್ಸ್ ಆಫ್ ಇಂಡಿಯಾ 13 ಭೂಮಿ 14 ಶ್ರೀರಸ್ತು ಶುಭಮಸ್ತು 15 ಮಹಾಲಕ್ಷ್ಮೀ 16 ಅಂಜಲಿ ಗೀತಾಂಜಲಿ 17 ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್ 18 ದುರ್ಗದ ಹುಲಿ 19 ಸ್ಪರ್ಶ 20 ಅಂತಃಪುರ ಹಾಗೂ

ಉಳಿದ ಅನುದಾನದಲ್ಲಿ ರಾಷ್ಟ್ರೀಯ ಚಿತ್ರೋತ್ಸವದಲ್ಲಿ ಆಯ್ಕೆಯಾಗಿ ಸ್ವರ್ಣಫಲಕ ಪಡೆದ ದ್ವೀಪ ಚಿತ್ರಕ್ಕೆ ರೂ 15 60 ಲಕ್ಷ, 1997–98ನೇ ಸಾಲಿನ ಅಮೇರಿಕಾ ಅಮೇರಿಕಾ ಚಿತ್ರಕ್ಕೆ ರೂ 10 00 ಲಕ್ಷ 1994–95ನೇ ಸಾಲಿನ ಭುವನಜ್ಯೋತಿ ಚಿತ್ರಕ್ಕೆ ರೂ 3 00 ಲಕ್ಷ ಮತ್ತು ನೂತನ ಪ್ರೊಜೆಕ್ಟರ್‌ಗಳಿಗೆ ಬಲ್ಬುಗಳನ್ನು ಖರೀದಿಸಲು ರೂ 1 00 ಲಕ್ಷ ಹಾಗೂ ಗುಣಾತ್ಮಕ ಸಮಿತಿಯ ಅತಿಥಿ ವೆಚ್ಚ ಹಾಗೂ ದಿನಭತ್ಯೆ ಪಾವತಿಗಾಗಿ ವೆಚ್ಚ ಮಾಡಲಾಗಿದೆ

ಬಾಗೇಪಲ್ಲಿ ಕ್ಷೇತ್ರದಲ್ಲಿರುವ ಪದವಿಪೂರ್ವ ಕಾಲೇಜು

179 (524) ಶ್ರೀ ಎನ್ ಸಂಪಂಗಿ (ಬಾಗೇಪಲ್ಲಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು

ಆ) ಈ ಕಾಲೇಜುಗಳಲ್ಲಿ ದೂರದ ಗ್ರಾಮಗಳಿಂದ ಬಡ ವಿದ್ಯಾರ್ಥಿಗಳು ಮುಂದಿನ ವ್ಯಾಸಂಗಕ್ಕೆ ಸುಮಾರು 30 ಕಿ ಮೀ ಅಂತರದಿಂದ ಆಗಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) 30 ಕಿ ಮೀ. ಅಂತರದ ಹತ್ತಿರದಲ್ಲಿ ಹೊಸದಾಗಿ ಒಂದು ಪದವಿ ಪೂರ್ವ ಕಾಲೇಜನ್ನು ತೆರೆದು ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಬಹುದೆ

ಈ) ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಮತ್ತು ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯಲ್ಲಿ ಕಾಲೇಜುಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಈ ಭಾಗದಲ್ಲಿ ಕಾಲೇಜುಗಳನ್ನು ಸ್ಥಾಪನೆಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಒಟ್ಟು 05 ಪದವಿ ಪೂರ್ವ ಕಾಲೇಜುಗಳಿವೆ

ಆ) ಹೌದು

ಇ) ಖಾಸಗಿ ಸಂಸ್ಥೆಗಳು ಮುಂದೆ ಬಂದಲ್ಲಿ ಹೆಚ್ಚಿನ ಆದ್ಯತೆ ನೀಡಿ ಕಾಲೇಜು ಮಂಜೂರಾತಿ ಬಗ್ಗೆ ಪರಿಶೀಲಿಸಲಾಗುವುದು

ಈ) ಹೌದು

ಉ) ಇದು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಖಚಿತವಾಗಿ ಹೇಳಲು ಬರುವುದಿಲ್ಲ

ತಿಪಟೂರು ನಗರದ ಸಾರ್ವಜನಿಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

182 (128) ಶ್ರೀ ಷಡಾಕ್ಷರ ಕೆ (ತಿಪಟೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿಪಟೂರು ನಗರದಲ್ಲಿ ಹಾಲಿ 100 ಹಾಸಿಗೆಗಳುಳ್ಳ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ

ಆ) ಹಾಗಿದ್ದಲ್ಲಿ ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಮೈಸೂರು ನಗರದ ಒಂಟಿಕೊಪ್ಪಲ್‌ನಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರಾತಿ

184 (323) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದ ಒಂಟಿಕೊಪ್ಪಲಿನಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ತೆರೆಯಬೇಕೆಂದು ಹಲವಾರು ಮನವಿಗಳಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಆ) ಬರುವ ಶೈಕ್ಷಣಿಕ ವರ್ಷದಿಂದ ಅಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಲು ಸರ್ಕಾರದ ನಿಲುವೇನು?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಸ್ತಾವನೆ ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ